ಕಥೆ

# ವೇಷ



**ಸಂತೋಷ ಗುಡ್ಡಿಯಂಗಡಿ**

ಕಲೆ: ವಿಶ್ವನಾಥ್ ಎ.ಎಸ್

ಹಾಡಿ, ಊರಲ್ಲ. ಊರಿನ ಹತ್ರವೂ ಇಲ್ಲ ಆ ಹಾಡಿ. ಹಳು ಬೆಳೆದ ಹಾಡಿಯಲ್ಲಿ ಬೋಗಿ, ಕುಂಟನೇರ್ಲುಗಳಂತ ಹದಾ ಹೈಟಿನ ಮರಗಳಿಗೆ ಹೆದರಿಸುವಂತೆ ಚೂರಿ ಮುಳ್ಳಿನ ಹಳು ಅವುಗಳ ಸಮಕ್ಕೆ ಬೆಳೆದು ನಿಂತಿದ್ದವು. ಬನ್ನೇರ್ಲು, ಬಾಗಾಳಂತ ಭಾರೀ ಎತ್ತರದ ಮರಗಳು ಆ ಹಾಡಿಯಲ್ಲಿ ತುಂಬಾ ಕಡ್ಮೆ. ಆದರೂ ಇದ್ದವು. ಬಾಗಾಳ ಹೂಗಿನ ಪರಿಮಳ ಆ ಹಾಡಿ ಹೀರಿಕೊಂಡು ಆ ಪರಿಮಳದಲ್ಲಿ ಕಳೆದು ಹೋಗುವುದು ಅಲ್ಲಿ ನೆಡ್ದಿದೆ ಮತ್ತು ನಡೆಯುತ್ತಿರುತ್ತೆ. ಮುಳ್ಳಿನ ಹಳು ಹಬ್ಬಿದ ಆ ಹಾಡಿಯೊಳಗೆ ಒಂದು ಸಣ್ಣ ಕಾಲು ದಾರಿ. ಅದರ ಸೆರಗು ಹಿಡ್ದು ನೆಡ್ದರೆ ಅದೂ ಚೂರಿ ಮುಳ್ಳಿನ ಕೊಕ್ಕೆಗೆ ಸಿಕ್ಕಿ ಹಾಕಿಕೊಳ್ಳದೆ ನೆಡ್ದರೆ ಆ ದಾರಿ ಮೂರು ಬಿಡಾರ ಇಪ್ಪಲ್ಲಿಗೆ ತಂದು ನಿಲ್ಲಿಸುತ್ತದೆ. ಅಲ್ಲಿ ಮೂರೇ ಬಿಡಾರ ಅಲ್ಲ, ಇನ್ನೂ ನಾಕ್ಕೈದು ಇದ್ದುದ್ದಕ್ಕೆ ಕುರುಹು ಇತ್ತು. ಆದರೆ ಈಗ ಅದು ಕುರುಹು ಅಷ್ಟೆ.

ಆ ಬಿಡಾರ ಆಗಲಿ ಅಲ್ಲಿದ್ದ ನಾಕ್ಕೈದು ಬಿಡಾರದ ಕುರುಹು ಆಗಲಿ ಆದಿಮಾನವರ ಕಾಲದವು ಅಲ್ಲ ಎಂದು ಸಾಬೀತು ಪಡಿಸಲು ಬಾರೀ ಕಷ್ಟ ಪಡಬೇಕಾಗಿಲ್ಲ. ಯಾಕೆಂದರೆ ಇರುವ ಮೂರು ಬಿಡಾರದ ತಟ್ಟಿ ಗೋಡೆ, ಮಾಡುಗಳ ತೆಂಗಿನ ಮಡ್ಲಿನ ಎಡ್ಕಿನಲ್ಲಿ ಲೋಕಸಭೆ, ವಿಧಾನಸಭೆ ಚುನಾವಣಾ ಪ್ರಚಾರದ ಫ್ಲೆಕ್ಸುಗಳನ್ನು ಸಿಕ್ಕಿಸಿ ಪ್ಯಾಚು ಮಾಡಲಾಗಿತ್ತು. ಮುಳ್ಳಿನ ಹಳುವಿಂದ ತುಂಬಿದ್ದರೂ ದಟ್ಟ ಹಸುರಿನ ಹಾಡಿಯೊಳಗೆ ಪಕ್ಕನೆ ಕಾಣುವ ಬಿಡಾರಗಳ ಎಡ್ಕಿನ ಅಲ್ಲಲ್ಲಿ ಹೊರಗೆ ನೀಕುತ್ತಿರುವ ಫ್ಲೆಕ್ಸಿನಲ್ಲಿದ್ದ ಕಣ್ಣು ಬಾಯಿಗಳು ಭೂತಗಳ ನೆನಪಿಸಿಬಿಡಬಹುದು. ಆದರೆ ಹೆದರಿಕೆಯಾಗುವುದಿಲ್ಲ. ಯಾಕೆಂದರೆ ಆ ಕಣ್ಣು ಬಾಯಿಗಳು ಆ ಬಿಡಾರಗಳಿಂತ ಹೆಚ್ಚು ಗುರ್ತಿನವು. ಅಲ್ಲಿ ವಾಸ ಇದ್ದರು.

ಈಸೂರ ತನಗೆ ಬುದ್ಧಿ ಬಂದಲ್ಲಿಂದ ಮನೆ ಒಕ್ಲಿಗೆ, ದೆಯ್ದುಮನಿ ಗೆಂಡಕ್ಕೆ ಬಡಿದ ದೋಲು ಆ ಬಿಡಾರದ ಮುಂದೆ ಬಿದ್ದಿತ್ತು. ದೋಲು ಎಂದ್ರೆ ದೇವರು ಅಂತ ನಂಬಿದ್ದ ಈಸೂರ ತನ್ನ ಮಗಳು ಬಚ್ಚಿ, ನೆರೆಯ ಬಿಡಾರದ ಮಕ್ಕಳು ಮರಿಯೆಲ್ಲ ಹಾತೆಗಳ ಕಂಡಂಗೆ